ಫೌಂಡೇಷನ್ ಫಾರ್ ಉಮನ್ ಡೆವಲಪ್‌ಮೆಂಟ್‌ಗೆ ರೂ. 1.00 ಕೋಟಿ ಮಂಜೂರು ಮಾಡಿದೆ. ಹಾಗೂ ರಾಜ್ಯದಲ್ಲಿ ಯಾವುದೇ ವಿಧಾನಸಭಾ ಕ್ಷೇತ್ರಕ್ಕೆ ನಿರ್ದಿಷ್ಟ ಹಣವನ್ನು ವಕ್ಫ್ ಸಂಸ್ಥೆಗಳಿಗೆ ಮೀಸಲಿಡಬೇಕೆಂಬ ನಿಯಮ ಇರುವುದಿಲ್ಲ.

ಆ) ಯಾವುದೇ ವಿಧಾನಸಭಾ ಕ್ಷೇತ್ರಕ್ಕೆ ನಿರ್ದಿಷ್ಟವಾದ ಹಣವನ್ನು ಮೀಸಲಿಡಬೇಕೆಂಬ ನಿಯಮ ಇರುವುದಿಲ್ಲ, ಮತ್ತು 30-6-95 ರವರೆಗೆ ಸರ್ಕಾರವು ಯಾವುದೇ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ.

ಇ) ಇಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 128ಕ್ಕೆ ಪೂರಕ ಟಿಪ್ಪಣಿ

1) 1995-96ರ ಆಯವ್ಯಯದಲ್ಲಿ ರೂ. 2.00 ಕೋಟಿಗಳನ್ನು ದುರಸ್ತಿ, ಜೀರ್ಣೋದ್ಧಾರ ಇತ್ಯಾದಿಗೆಂದು ರಾಜ್ಯದ ವಕ್ಫ್ ಸಂಸ್ಥೆಗಳಿಗೆ ಮಂಜೂರು ಮಾಡಲಾಗಿದೆ. ಜಿಲ್ಲೆಗಳಿಗೆ ಪ್ರತ್ಯೇಕವಾಗಿ ಹಣ ಹಂಚಿಕೆ ಆಗಿರುವುದಿಲ್ಲ.

2) 1995-96ರ ಅನುದಾನ ಇನ್ನೂ ಬಿಡುಗಡೆ ಆಗಿರುವುದಿಲ್ಲ.

3) ಆಲ್-ಅಹಮರ್ ವೆಲ್‌ಫೇರ್ ಟ್ರಸ್ಟ್, 4:1, 2ನೇ ಮುಖ್ಯರಸ್ತೆ, 1ನೇ ಬ್ಲಾಕ್, ಆರ್.ಟಿ.ನಗರ, ಬೆಂಗಳೂರು-32, ಇವರಿಗೆ ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ ಸಹಾಯಾನುದಾನವಾಗಿ ರೂ. 1.00 ಲಕ್ಷ ಮಂಜೂರು ಮಾಡಲಾಗಿದೆ. (ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ 62 ಡಬ್ಲ್ಯೂ ಜಿಎ 94 ದಿನಾಂಕ 30-3-93ರಲ್ಲಿ ರೂ. 70,000-00). ಸದರಿ ಸಹಾಯಾನುದಾನದ ಮೊತ್ತವನ್ನು ಎರಡು ಕಂತುಗಳಲ್ಲಿ ಬಿಡುಗಡೆ ಮಾಡಲಾಗಿದೆ.

ಮಾಜಿ ಸೈನಿಕರ ಕಲ್ಯಾಣಕ್ಕಾಗಿ ಹಣಕಾಸಿನ ಸಂಸ್ಥೆ ಸಾಪನೆ

133 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಕಾರಾಗೃಹ, ಗೃಹರಕ್ಷಕ ದಳ ನಾಗರೀಕ ರಕ್ಷಣೆ, ಮತ್ತು ಸೈನಿಕ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಒಟ್ಟು ಮಾಜಿ ಸೈನಿಕರ ಸಂಖ್ಯೆ ಎಷ್ಟು?

ಆ) ಮಾಜಿ ಸೈನಿಕರಿಗೆ ಸರಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು?

ಇ) ತಮಿಳುನಾಡಿನಲ್ಲಿ ಮಾಜಿ ಸೈನಿಕರಿಗಾಗಿ ಪ್ರತ್ಯೇಕ ಹಣಕಾಸಿನ ಸಂಸ್ಥೆಯನ್ನು ಸ್ಥಾಪಿಸಿರುವುದು ನಿಜವೇ?

ಈ) ರಾಜ್ಯದಲ್ಲೂ ಸಹ ಮಾಜಿ ಸೈನಿಕರಿಗಾಗಿ ಪ್ರತ್ಯೇಕ ಹಣಕಾಸು ನಿಗಮಸಂಸ್ಥೆ ಸ್ಥಾಪಿಸಲು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಕಾರಾಗೃಹ, ಗೃಹ ರಕ್ಷಕ ದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಮಂತ್ರಿಗಳು) :

ಅ) 36,494

ಆ) ಅನುಬಂಧದಲ್ಲಿ ವಿವರಿಸಲಾಗಿದೆ.

ಇ) ತಮಿಳುನಾಡಿನಲ್ಲಿ ಪ್ರತ್ಯೇಕ ಮಾಜಿ ಸೈನಿಕರ ನಿಗಮ ಸ್ಥಾಪಿಸಲಾಗಿದೆ.

ಈ) ಸರ್ಕಾರದ ಪರಿಶೀಲನೆಯಲ್ಲಿದೆ.

ಅನುಬಂಧ

1) ಸರ್ಕಾರಿ ಮತ್ತು ಇತರ ಉದ್ದಿಮೆಗಳಲ್ಲಿ ಉದ್ಯೋಗ ದೊರಕಿಸಲಾಗುತ್ತದೆ.

2) ಸರ್ಕಾರಿ ಮತ್ತು ಇತರ ಉದ್ದಿಮೆಗಳಲ್ಲಿ ಶೇಕಡ 10ರಷ್ಟು ಹುದ್ದೆಗಳಂ ಮೀಸಲಾತಿ.

3) ಸೈನ್ಯದಲ್ಲಿ ಸಲ್ಲಿಸಿದ ಸೇವಾವಧಿ ಮತ್ತು 3 ವರ್ಷಗಳು ಸೇರಿ ಆಗುವ ಮೊತ್ತದಷ್ಟು ವಯೋಮಿತಿ ಸಡಿಲಿಕೆ. 30 ವಯಸ್ಸಿನ ತರುವಾಯ ನೇಮಕಗೊಳ್ಳುವ ಮಾಜಿ ಸೈನಿಕರಿಗೆ 8 ವರ್ಷಕ್ಕೆ ಮೀರದ ಅವಧಿಯನ್ನು ಪಿಂಚಣಿಯ ಸಮಯದಲ್ಲಿ ಸೇರಿಸಿ ಪಿಂಚಣಿಯನ್ನು ನಿಗಧಿ ಪಡಿಸಲಾಗುವುದು.

4) ತುರ್ತು ಪರಿನಿಯುಕ್ತ ಮತ್ತು ಅಲ್ಪಾವಧಿ ಅಧಿಕಾರಿಗಳು ಸರ್ಕಾರಿ ಸೇವೆಗೆ ನೇಮಕಗೊಂಡಾಗ ಅವರು ರಕ್ಷಣಾ ಪಡೆಯಲ್ಲಿ ಸೇವೆ ಸಲ್ಲಿಸಿದ ಅವಧಿಗನುಗುಣವಾಗಿ ವೇತನ ನೀಡಲಾಗುವುದು.

5) ಮೆಟ್ರಿಕ್ಯೂಲೇಶನ್ ಪರೀಕ್ಷೆ ಪಾಸಾಗಿ ರಕ್ಷಣ ಪಡೆಯಲ್ಲಿ 15 ವರ್ಷ ಸೇವೆ ಸಲ್ಲಿಸಿದ ಮಾಜಿ ಸೈನಿಕರನ್ನು 'ಸಿ' ವರ್ಗದ ಹುದ್ದೆಯ ಶೈಕ್ಷಣಿಕ ಅರ್ಹತೆ ಪದವಿ ಎಂದು ಇರುವ ಹುದ್ದೆಗಳಿಗೆ ನಿಯೋಜಕರು ಅರ್ಹರೆಂದು ಪರಿಗಣಿಸಿ ನೇಮಕ ಮಾಡಿಕೊಳ್ಳುವುದು.

6) ವೇತನ ನಿರ್ಣಯ : ರಕ್ಷಣಾ ಪಡೆಯಿಂದ ನಿವತ್ತರಾಗಿ ರಾಜ್ಯದ ನಾಗರೀಕ ಸೇವೆಯಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಮಾಜಿ ಸೈನಿಕರಿಗೆ ಪ್ರೊತ್ಸಾಹವೆಂದು ಅವರು ಪಡೆಯುತ್ತಿರುವ ಪಿಂಚಣಿಯನ್ನು ಪರಿರಕ್ಷಿತಗೊಳಿಸುವುದು. ಜೆ.ಸಿ.ಒ.ವರೆಗಿನ ರ್ಯಾಂಕಿನ ಮಾಜಿ ಸೈನಿಕರ ವೇತನವನ್ನು ನಿರ್ಣಯಗೊಳಿಸುವಾಗ ಅವರು ನಿವೃತ್ತಿಪೂರ್ವದಲ್ಲಿ ಪಡೆಯುತ್ತಿದ್ದ ವೇತನದ ಆಧಾರದ ಮೇಲೆ ನಿರ್ಣಯಿಸುವುದು ಹಾಗೂ ಅವರು ಪಡೆಯುತ್ತಿರುವ ಪಿಂಚಣಿಯ ಪೂರ್ಣ ಮೊತ್ತವನ್ನು ಕಡೆಗಣಿಸಲಾಗುವುದು. ನಿವೃತ್ತ ಅಧಿಕಾರಿಗಳ ವೇತನ ನಿರ್ಣಯ ಮಾಡುವಾಗ ಅವರು ಪಡೆಯುತ್ತಿರುವ ಪಿಂಚಣಿಯಲ್ಲಿ ರೂ. 500.00ನ್ನು ಕಡೆಗಣಿಸಲಾಗುವುದು.

7) ಸ್ವಯಂ ಉದ್ಯೋಗ : ಸಹಕಾರಿ ಸಂಘಗಳನ್ನು ಸ್ಥಾಪಿಸಿ, ಹೈನುಗಾರಿಕೆ, ಸಾರಿಗೆ, ಮೀನುಗಾರಿಕೆ, ಕುಟೀರ ಉದ್ಯಮಗಳನ್ನು ಕೈಗೊಳ್ಳುವಂತೆ ಮಾಜಿ ಸೈನಿಕರನ್ನು ಪ್ರೋತ್ಸಾಹಿಸುವುದು. ಇದಕ್ಕೆ ಸರ್ಕಾರದಿಂದ ರಸ್ತೆ ಪರವಾನಗಿ ಹಾಗೂ ಕೈಗಾರಿಕಾ ಶೆಡ್ಡುಗಳನ್ನು ಕೊಡಿಸುವುದು. ಸ್ವಯಂ ಉದ್ಯೋಗ ಸ್ಥಾಪಿಸಲು ಇಚ್ಚಿಸುವ ಮಾಜಿ ಸೈನಿಕರಿಗೆ ವಿವಿಧ ಹಣಕಾಸು ಸಂಸ್ಥೆಗಳಿಂದ ಸಾಲ ಮಂಜೂರು ಮಾಡಿಸುವುದು.

8) ಅಂಗವಿಕಲ ಮಾಜಿ ಸೈನಿಕರಿಗೆ ತಾಂತ್ರಿಕ ಶಾಲೆಯಲ್ಲಿ ತರಬೇತಿ : ಕ್ವೀನ್ ಮೇರಿ ತಾಂತ್ರಿಕ ಶಿಕ್ಷಣ ಸಂಸ್ಥೆಯಲ್ಲಿ ತರಬೇತಿ ಪಡೆಯಲಿಚ್ಚಿಸುವ ಅಂಗವಿಕಲ ಮಾಜಿ ಸೈನಿಕರಿಗೆ ಮಾಸಿಕ ನಿರ್ವಹಣ ರೂ. 600.00 ನೀಡುವುದು.

9) ಮನೆ ಮತ್ತು ಕೃಷಿ ಭೂಮಿಯ ವಿಧಿಮಾನ್ಯ ರಕ್ಷಣೆ : ಕರ್ನಾಟಕ ಸರ್ಕಾರ 1983 ಬಾಡಿಗೆ ನಿಯಂತ್ರಣ ಕಾಯ್ದೆ ತಿದ್ದುಪಡಿಯಲ್ಲಿ ಅಧಿನಿಯಮ 21 ಬಿ ಹೊಸ ಪ್ರಕರಣವನ್ನು ಸೇರಿಸಲಾಗಿ ಅದರ ಪ್ರಕಾರ ಸೈನಿಕರು ಮಾಜಿ ಸೈನಿಕರು ಮತ್ತು ಯುದ್ಧದಲ್ಲಿ ಮಡಿದ ಯೋಧರ ಮತ್ತು ಮಾಜಿ ಸೈನಿಕರ ವಿಧವೆಯರು ತಮ್ಮ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದಲ್ಲಿ ಅದನ್ನು ತಮ್ಮ ಸ್ವಂತ ವಾಸಕ್ಕಾಗಿ ಬಾಡಿಗೆದಾರರಿಂದ ಮರಳಿ ಪಡೆಯುವ ವ್ಯವಸ್ಥೆಯಿದೆ.

10) ಕರ್ನಾಟಕ ಭೂಸುಧಾರಣಾ ಕಾಯ್ದೆ 1961ರ ತಿದ್ದುಪಡಿಯಲ್ಲಿ ಮಾಜಿ ಸೈನಿಕರು ಸ್ವಂತವಾಗಿ ಕೃಷಿ ಮಾಡಲು ತಮ್ಮ ಜಮೀನನ್ನು ಮರಳಿ ಪಡೆಯುವ ವ್ಯವಸ್ಥೆಯಿದೆ.

11) ಕಾನೂನು ಸಲಹೆ : ವಾರ್ಷಿಕ ವರಮಾನ ರೂ. 8000ಕ್ಕೆ ಮೀರದ ಮಾಜಿ ಯೋಧರಿಗೆ ಪುಕ್ಕಟೆಯಾಗಿ ಕಾನೂನು ಸಲಹೆ ನೀಡುವ ವ್ಯವಸ್ಥೆಯಿದೆ.

12) ಭೂಮಿ ಮತ್ತು ನಿವೇಶನಗಳು : ಯುದ್ಧದಲ್ಲಿ ಮಡಿದ ಯೋಧರ ಅವಲಂಬಿತರಿಗೆ 2 ಎಕರೆ ನೀರಾವರಿ ಭೂಮಿ ಅಥವಾ 4 ಎಕರೆ ಮಳೆಯಾಶ್ರಿತ ಭೂಮಿ ಅಥವಾ 8ಎಕರೆ ಒಣ ಭೂಮಿಯನ್ನು ಮಂಜೂರು ಮಾಡುವುದು. ಮಂಜೂರಾತಿಗೆ ಭೂಮಿ ಇಲ್ಲದಿದ್ದಲ್ಲಿ ಭೂಮಿಯ ಬದಲು ರೂ. 25000.00 ನಗದು ಹಣ ನೀಡಲಾಗುವುದು.

13) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಶೇಕಡ 5ರಂತೆ ಮತ್ತು ಇತರೆ ನಗರಾಭಿವೃದ್ಧಿ ಮಂಡಳಿಗಳು ಶೇಕಡ 9ರಂತೆ ಸೈನಿಕರು ಮತ್ತು ಮಾಜಿ ಸೈನಿಕರು ಇವರಿಗೆ ನಿವೇಶನಗಳನ್ನು ಕಾಯ್ದಿರಿಸಿದೆ. ನಗರ ಪಾಲಿಕೆ ಮತ್ತು ಸ್ಥಳೀಯ ಸಂಸ್ಥೆಗಳು ಸಹಾ ಶೇಕಡ 10ರಷ್ಟು ನಿವೇಶನಗಳನ್ನು ಕಾಯ್ದಿರಿಸಿವೆ. ಕರ್ನಾಟಕ ಗೃಹ ನಿರ್ಮಾಣ ಮಂಡಲಿಯು ಶೇ. 5ರಷ್ಟು ಕಟ್ಟಿದ ಮನೆಗಳನ್ನು ಸೈನಿಕರು ಮಾಜಿ ಸೈನಿಕರಿಗೆ ವಿತರಿಸಲು ಕಾಯ್ದಿರಿಸಿದೆ.

14) ಯುದ್ಧದಲ್ಲಿ ಮಡಿದ ಯೋಧರ ವಿಧವೆಯರಿಗೆ, ಯುದ್ಧ ಮತ್ತು ಯುದ್ಧ ಸಮಾನ ಕಾರ್ಯಾಚರಣೆಗಳಲ್ಲಿ ಮಡಿದ ಯೋಧರ ವಿಧವೆಯರಿಗೆ, ಅವಲಂಬಿತರಿಗೆ ಮತ್ತು ಯುದ್ಧದಲ್ಲಿ ಶೇಕಡ 50 ಮತ್ತು ಅದಕ್ಕೂ ಹೆಚ್ಚು ಅಂಗವಿಕಲತೆ ಹೊಂದಿರುವ ಯೋಧರಿಗೆ ಉಚಿತ ನಿವೇಶನದಲ್ಲಿ ಮನೆಗಳನ್ನು ಕಟ್ಟಿಕೊಡಲಾಗುವುದು.

15) ಸೈನಿಕರ ಮಕ್ಕಳ ವಿದ್ಯಾರ್ಥಿ ನಿಲಯ : ಧಾರವಾಡ, ಕಾರವಾರ, ಬೆಳಗಾವಿ ಮತ್ತು ಅಥಣಿಯಲ್ಲಿ ಸೈನಿಕರ ಮಕ್ಕಳ ವಿದ್ಯಾರ್ಥಿ ನಿಲಯವನ್ನು ನಡೆಸಲಾಗುತ್ತಿದೆ. ಈ ವಿದ್ಯಾರ್ಥಿ ನಿಲಯಗಳಲ್ಲಿ ಮಾಜಿ ಸೈನಿಕರ ಮತ್ತು ಯುದ್ಧದಲ್ಲಿ ಮಡಿದ ಯೋಧರ ಮಕ್ಕಳಿಗೆ ಊಟ, ವಸತಿ ಮತ್ತು ಸಮವಸ್ತ್ರಗಳನ್ನು ಉಚಿತವಾಗಿ ನೀಡಲಾಗುವುದು. ಈ ವಿದ್ಯಾರ್ಥಿ ನಿಲಯಗಳಲ್ಲಿ ಒಟ್ಟು 105 ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶವಿರುವುದು.

16) ಮಾಜಿ ಸೈನಿಕರ ವಿಶ್ರಾಂತಿಗೃಹ : ಬೆಂಗಳೂರು, ಬೆಳಗಾವಿ, ಅಥಣಿ, ಕಾರವಾರ ಮತ್ತು ಮಡಿಕೇರಿಯಲ್ಲಿ ಮಾಜಿ ಸೈನಿಕರ ವಿಶ್ರಾಂತಿಗೃಹಗಳಿರುವುವು. ಮಾಜಿ ಸೈನಿಕರು ಈ ನಗರ ಮತ್ತು ಪಟ್ಟಣಗಳಿಗೆ ವಿವಿಧ ಕೆಲಸ ಕಾರ್ಯಗಳಿಗೆ ಭೇಟಿ ಕೊಟ್ಟಾಗ ಈ ವಿಶ್ರಾಂತಿ ಗೃಹಗಳಲ್ಲಿ ವಸತಿ ಸೌಕರ್ಯ ಪಡೆಯಬಹುದು. ಇದಕ್ಕಾಗಿ ಮಾಜಿ ಸೈನಿಕರು ನಾಮಮಾತ್ರದ ವೆಚ್ಚವನ್ನು ಭರಿಸಬೇಕಾಗುವುದು.

17) ಪಿಂಚಣಿದಾರ ಮಾಜಿ ಸೈನಿಕರ ಮಕ್ಕಳಿಗೆ ಶೈಕ್ಷಣಿಕ ರಿಯಾಯಿತಿಗಳನ್ನು ನೀಡಲಾಗುವುದು.

18) ವೃತ್ತಿಪರ ವಿದ್ಯಾ ಸಂಸ್ಥೆಗಳಲ್ಲಿ ಲಭ್ಯವಿರುವ ಸೀಟುಗಳ ಶೇಕಡ ಎರಡೂವರೆಯಷ್ಟು ಸೀಟುಗಳನ್ನು ಮಾಜಿ ಸೈನಿಕರ ಮಕ್ಕಳಿಗೆ ಕಾಯ್ದಿರಿಸಿದೆ. ತಾಂತ್ರಿಕ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ಸೈನಿಕರ ಮತ್ತು ಮಾಜಿ ಸೈನಿಕರ ಮಕ್ಕಳಿಗೆ ಅನುಕ್ರಮವಾಗಿ 100 ಮತ್ತು 06 ಸೀಟುಗಳನ್ನು ಕಾಯ್ದಿರಿಸಿದೆ.

19) ಯುದ್ಧ ಪ್ರಶಸ್ತಿ : ಒಂದು ದಂಪತಿಗೆ ಒಂದು ಮಗುವಿದ್ದು ಅವರು ಅಥವಾ ಇಬ್ಬರು ಮಕ್ಕಳಿದ್ದು ಇಬ್ಬರು ಮಕ್ಕಳು ಹಾಗೂ ಮೂರು ಅಥವಾ ಅದಕ್ಕಿಂತ ಹೆಚ್ಚು ಮಕ್ಕಳಿದ್ದು ಅವರಲ್ಲಿ ಮೂರು ಮಕ್ಕಳು ರಾಷ್ಟ್ರೀಯ ತುರ್ತು ಪರಿಸ್ಥಿತಿಯಲ್ಲಿ ರಕ್ಷಣಾ ಪಡೆಯಲ್ಲಿ ಸೇವೆ ಸಲ್ಲಿಸಿದರೆ ಅಂತಹ ಮಕ್ಕಳ ತಂದೆ:ತಾಯಿಗೆ ವಾರ್ಷಿಕ ರೂ. 450.00, 600.00 ಮತ್ತು 750.00ರಂತೆ ಅನುದಾನ ಕೊಡಲಾಗುವುದು.

20) ಶೌರ್ಯ ಮತ್ತು ಶೌರ್ಯೋತ್ತರ ಪ್ರಶಸ್ತಿ : ಕರ್ನಾಟಕ ರಾಜ್ಯದ ಖಾಯಂ ನಿವಾಸಿಗಳಾದ ಶೌರ್ಯ ಮತ್ತು ಶೌರ್ಯೋತ್ತರ ಪ್ರಶಸ್ತಿ ವಿಜೇತರಿಗೆ ನಗದು ಅನುದಾನಗಳನ್ನು ನೀಡಲಾಗುವುದು.

21) ಜೈ ಜವಾನ್ ಸ್ಟಾಲ್ : ನಗರ ಪಾಲಿಕೆ ಮತ್ತು ಪುರ ಸಭೆಗಳಿಂದ 10 ಮತ್ತು 10 ಅಡಿ ಅಗಲದ ನಿವೇಶನಗಳನ್ನು ಅಂಗವಿಕಲ ಯೋಧರಿಗೆ ಜೈ ಜವಾನ್ ಸ್ಟಾಲ್ ತೆರೆಯಲು ಮಂಜೂರು ಮಾಡಲು ಆದೇಶವಿದೆ. 3-4 ವರ್ಷಗಳಿಂದ ಇಂತಹ ನಿವೇಶನಗಳನ್ನು ನೀಡಿರುವುದಿಲ್ಲ.

22. ಪ್ರಪಂಚದ 2ನೇ ಮಹಾಯುದ್ಧದಲ್ಲಿ ಭಾಗವಹಿಸಿದ ಪಿಂಚಣಿ ಇಲ್ಲದೆ ಬಿಡುಗಡೆಯಾದ ಮಾಜಿ ಸೈನಿಕರಿಗೆ ಮತ್ತು ಅವರ ವಿಧವೆಯರಿಗೆ ಕೆಲವು ನಿಭಂದನೆಗೊಳಪಟ್ಟು ಮಾಸಿಕ ರೂ. 300.00 ರಂತೆ ಗೌರವಧನ ಪಾವತಿ.

ಇವುಗಳಲ್ಲದೆ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಗಳ ವಿಶೇಷ ನಿಧಿ ಹಾಗೂ ಕಲ್ಯಾಣ ನಿಧಿಯಿಂದ ಈ ಕೆಳಗಿನ ಸೌಲಭ್ಯ ರಿಯಾಯಿತಿಗಳನ್ನು ನೀಡಲಾಗುತ್ತಿದೆ.

(1) 56 ಯುದ್ಧ ವಿಧವೆಯರಿಗೆ ವಾರ್ಷಿಕ ನಿರ್ವಹಣ ಅನುದಾನ ರೂ. 2500.00 ರಂತೆ ನೀಡಲಾಗುವುದು.

(2) ರಾಷ್ಟ್ರೀಕೃತ ಬ್ಯಾಂಕುಗಳಿಂದ ಸ್ವಯಂ ಉದ್ಯೋಗಕ್ಕಾಗಿ ಪಡೆದ ಸಾಲದ ಮೇಲಿನ ಬಡ್ಡಿ ರಿಯಾಯಿತಿ.

(3) ಕನ್ನಡಕ ಶ್ರವಣ ಸಾಧನಗಳಿಗೆ ಅನುದಾನ.

(4) ಮಾಜಿ ಸೈನಿಕರಿಗೆ ತುರ್ತು ಧನ ಸಹಾಯ

(5) ಮಾಜಿ ಸೈನಿಕರು ಮರಣ ಹೊಂದಿದಾಗ ಅವರ ವಿಧವೆ ಅವಲಂಬಿತರಿಗೆ ಮರಣ ಪರಿಹಾರ ಧನ ಸಹಾಯ

(6) ಬಡವರಾದ ಮಾಜಿ ಸೈನಿಕರಿಗೆ ಅವರ ಅವಲಂಬಿತರಿಗೆ ವಾರ್ಷಿಕ ಧನಸಹಾಯ.

(7) ಪಿಂಚಣಿದಾರರಲ್ಲದ ಮಾಜಿ ಸೈನಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ.

ವರಾಹಿ ಏತ ನೀರಾವರಿ ಯೋಜನೆಯಲ್ಲಿನ ಅವ್ಯವಹಾರ

320 - ಶ್ರೀ ಪ್ರತಾಪ್ ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ದಕ್ಷಿಣ ಕನ್ನಡ ಜಿಲ್ಲೆಯ ವರಾಹಿ ಏತ ನೀರಾವರಿ ಯೋಜನೆಯಲ್ಲಿ ಬಹಳಷ್ಟು ಅವ್ಯವಹಾರ ಆಗಿರುವುದರ ಬಗ್ಗೆ ಪತ್ರಿಕೆಗಳಲ್ಲಿ ಬಂದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ವರಾಹಿ ಯೋಜನೆಯ ಈ ಅವ್ಯವಹಾರವನ್ನು ತನಿಖೆ ನಡೆಸುವಂತೆ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಸಭೆಯಲ್ಲಿ ಉಸ್ತುವಾರಿ ಸಚಿವರ ಉಪಸ್ಥಿತಿಯಲ್ಲಿ ನಿರ್ಣಯದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಈ ವಿಷಯಗಳಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಹೌದು

ಆ) ಇಲ್ಲ

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.